**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 325 /2021

ಸಿಡಬ್ಲ್ಯೂ- 1/ ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜಗಧೀಶ |
| ತಂದೆಯ ಹೆಸರು | ಃ | ಶಿವರುದ್ರಪ್ಪ ಹಾವನೂರ |
| ವಯಸ್ಸು | ಃ | 44 ವರ್ಷ |
| ವೃತ್ತಿ | ಃ | ರೈತಾಬಿ |
| ವಾಸ್ತವ್ಯ | ಃ | ಗೊಟಗೊಡಿಕೊಪ್ಪ, ಮುಂಡಗೋಡ |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 29-01-2024.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 15-12-2020 ರಂದು ಗೊಟಗೊಡಿಕೊಪ್ಪದ ತಿರುವಿನ ಬಳಿ ಮೃತ ವಿರೇಶನಿಗೆ ಅಪಘಾತ ಆಗಿರುತ್ತದೆ ಎಂದು ಚಾಸಾ 6 ರವರು ನನಗೆ ಫೋನ ಕರೆ ಮೂಲಕ ತಿಳಿಸಿರುತ್ತಾರೆ. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ವಿರೇಶನು ಮೃತಪಟ್ಟಿದ್ದು ಮೃತ ದೇಹವನ್ನು ಮುಂಡಗೋಡದ ಸರಕಾರಿ ಆಸ್ಪತ್ರೆಗೆ ತಂದಿರುತ್ತೇವೆ. ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಆತನು ಮೃತಪಟ್ಟಿರುವ ಬಗ್ಗೆ ದೃಢೀಕರಿಸಿರುತ್ತಾರೆ. ನಂತರ ಮಧ್ಯಾಹ್ನ 2-30 ಗಂಟೆ ಸುಮಾರಿಗೆ ಆಸ್ಪತ್ರೆಯಲ್ಲಿಯೇ ಪೋಲಿಸರಿಗೆ ಹೇಳಿಕೆ ದೂರನ್ನು ಕೊಟ್ಟಿರುತ್ತೇನೆ. ಅಪಘಾತವು ಹೇಗೆ ಸಂಭವಿಸಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಆ ಕುರಿತು ನನಗೆ ಯಾರೂ ಸಹ ಹೇಳಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಅದೇ ದಿನ ಪೋಲಿಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಅವರಿಗೆ ನಾನೇ ಸ್ಥಳವನ್ನು ತೋರಿಸಿರುತ್ತೇನೆ. ಪೋಲಿಸರು 6-15 ಗಂಟೆಯಿಂದ 7-15 ಗಂಟೆವರೆಗೆ ನನ್ನ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ. ನನ್ನೊಂದಿಗೆ ಸ್ಥಳದಲ್ಲಿ ಚಾಸಾ 4 ಮತ್ತು 5 ರವರು ಉಪಸ್ಥಿತರಿದ್ದರು. ಪಂಚನಾಮೆ ಸಮಯದಲ್ಲಿ ಅಪಘಾತ ಸ್ಥಳದ ಫೋಟೊಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತ ಸ್ಥಳದಲ್ಲಿ ಪಂಚನಾಮೆ ಸಮಯದಲ್ಲಿ ತೆಗೆದ ಫೋಟೊದಲ್ಲಿ ತಾನಿರುವುದನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು, ಸಿ.ಡಿ. ಯನ್ನು ನಿಪಿ 5 ಎಂದು ಗುರುತಿಸಲಾಯಿತು.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ದಿಃ 15-12-2020 ರಂದು ಪೋಲಿಸರಿಗೆ ವಿರೇಶ ಎಂಬಾತನು ಪಾಳಾ ಕಡೆಯಿಂದ ಬರುತ್ತಿರಲಿಲ್ಲ, ಮಳಗಿ ಕಡೆಯಿಂದ ಬರುತ್ತಿದ್ದನು ಎಂದು ಮರುಹೇಳಿಕೆಯನ್ನು ಕೊಟ್ಟಿರುತ್ತಿರಿ ಎಂದರೆ ಸರಿಯಲ್ಲ. ಸದ್ರಿ ಮರು ಹೇಳಿಕೆ ಭಾಗವನ್ನು ನಿಪಿ 6 ಎಂದು ಗುರುತಿಸಲಾಯಿತು. ಆ ದಿನ ಚಾಸಾ 6 ರವರು ಅಪಘಾತವು ಇದೇ ರೀತಿ ಸಂಭವಿಸಿರುತ್ತದೆ ಎಂದು ನಿಮಗೆ

ಹೇಳಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮರುಹೇಳಿಕೆಯನ್ನು ಕೊಟ್ಟಿದ್ದರೂ ಸಹ ಈಗ ಆರೋಪಿತನಿಗೆ ಸಹಾಯವಾಗಲಿ ಎಂದು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎಂ.ಎಂ. ವಕೀಲರಿಂದ.</u>**

ನೀವು ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾವ ಪೋಲಿಸರು ಜರುಗಿಸಿರುತ್ತಾರೆ ಎಂದು ಅವರ ಹೆಸರು ನನಗೆ ಹೇಳಲಾಗುವುದಿಲ್ಲ. ಅಪಘಾತ ಸ್ಥಳದಿಂದ ಅಪಘಾತಪಡಿಸಿದ ವಾಹನ ಮತ್ತು ಅಪಘಾತದಲ್ಲಿ ಮೃತಪಟ್ಟವನ ವಾಹನ ಎಷ್ಟು ಅಂತರದಲ್ಲಿ ಬಿದ್ದಿದ್ದವು ಎಂದರೆ ಸಾಕ್ಷಿಯು ಸ್ಥಳದಲ್ಲಿ ಅಕ್ಕಪಕ್ಕದಲ್ಲಿಯೇ ಬಿದ್ದಿದ್ದವು ಎಂದು ನುಡಿದಿರುತ್ತಾರೆ. ಅಪಘಾತಕ್ಕೊಳಪಟ್ಟ ವಾಹನಗಳ ಸಂಖ್ಯೆಗಳನ್ನು ನನಗೆ ಹೇಳಲಾಗುವುದಿಲ್ಲ. ಅಪಘಾತ ಸ್ಥಳದಲ್ಲಿ ರಸ್ತೆಯ ಮೇಲೆ ಯಾವ ನಾಮಫಲಕಗಳು ಇದ್ದವು ಎಂದರೆ ನನಗೆ ಹೇಳಲಾಗುವುದಿಲ್ಲ. ಪಂಚನಾಮೆಯಲ್ಲಿ ನಮೂದಿಸಿರುವ ಸಂಗತಿಗಳನ್ನು ಪೋಲಿಸರಿಗೆ ನಾನೇ ಹೇಳಿರುತ್ತೇನೆ. ನಿಪಿ 2 ರಲ್ಲಿ ಅಪಘಾತ ಸ್ಥಳದಲ್ಲಿ ಮೃತ ವ್ಯಕ್ತಿ ಮತ್ತು ವಾಹನಗಳು ಬಿದ್ದಿದ್ದವುಗಳ ಬಗ್ಗೆ ಹೇಳಿದ್ದನ್ನು ಹೊರತುಪಡಿಸಿ ಬೇರೆ ಏನನ್ನು ಹೇಳಿರುವುದಿಲ್ಲ. ಘಟನಾ ಸ್ಥಳದಲ್ಲಿ ಪೋಲಿಸರು ಫೋಟೊ ಬೇಕಾಗುತ್ತದೆ, ನಿಲ್ಲಿ ಎಂದು ಹೇಳಿದ್ದಕ್ಕೆ ನಿಂತಿರುತ್ತೇನೆ ಎಂದರೆ ನಿಜ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿ ನನ್ನ ಚಿಕ್ಕಪ್ಪನ ಮಗ ಎಂದರೆ ನಿಜ. ಅಪಘಾತ ಸ್ಥಳದ ಚೆಕಬಂಧಿ ನನಗೆ ಹೇಳಲಾಗುವುದಿಲ್ಲ. ಮೃತ ವ್ಯಕ್ತಿಯ ಹೆಂಡತಿ ಹಾನಗಲ್‌ದ ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನಿಜ. ಮೃತನ ಕುಟುಂಬದವರಿಗೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವಿರೇಶನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನದ ವಿಮೆ ಮತ್ತು ಆರ್.ಸಿ. ಪುಸ್ತಕಗಳು ಇರಲಿಲ್ಲ, ಅದೇ ರೀತಿ ಆತನಿಗೆ ದ್ವಿಚಕ್ರ ವಾಹನವನ್ನು ಚಲಾಯಿಸುವ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸಾಕ್ಷಿಯು ಇದ್ದಿರಬಹುದು ಎಂದು ನುಡಿದಿರುತ್ತಾರೆ. ಆರೋಪಿತನ ವಾಹನಕ್ಕೆ ವಿಮೆ ಮತ್ತು ಆರ್.ಸಿ. ಪುಸ್ತಕ ಹಾಗೂ ಆತನು ವಾಹನ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದರಿಂದ ಆತನ ವಿರುದ್ಧ ಪ್ರಸ್ತುತ ಪ್ರಕರಣ ದಾಖಲಿಸಿರುತ್ತಿರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

**ಪ್ರ.ದ.ನ್ಯಾ.ದಂ. ಮುಂಡಗೋಡ.**